ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಬಜೆಟ್

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ    ದಿನಾಂಕ : DATE : 15/07/2019

Quicks

# ಬಜೆಟ್‌ಗೆ ಅನುಮೋದನೆ ಸಿಗುತ್ತಾ?

ಬೆಂಗಳೂರು: ಪ್ರಸಕ್ತ ರಾಜಕೀಯ ಬಿಕ್ಕಟ್ಟಿನ ಸನ್ನಿವೇಶದಲ್ಲಿ 2019-20ನೇ ಸಾಲಿನ ಮುಂಗಡಪತ್ರಕ್ಕೆ ಪ್ರಸಕ್ತ ವಿಧಾನಮಂಡಲ ಅಧಿವೇಶನದಲ್ಲಿ ಅನುಮೋದನೆ ಸಿಗಬಹುದಾ ಎಂಬ ಕುತೂಹಲದ ಚರ್ಚೆ ಸಾರ್ವಜನಿಕ ವಲಯದಲ್ಲಿ ನಡೆದಿದೆ.



ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಕಳೆದ ಫೆಬ್ರವರಿಯಲ್ಲಿ ಬಜೆಟ್ ಮಂಡನೆ ಮಾಡಿದ್ದ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರು ನಾಲ್ಕು ತಿಂಗಳ ಅವಧಿಗೆ ಲೇಖಾನುದಾನ ಪಡೆದಿದ್ದರು. ಈ ಅವಧಿ ಜುಲೈ ಅಂತ್ಯಕ್ಕೆ ಕೊನೆಗೊಳ್ಳಲಿದ್ದು, ವಿಧಾನಮಂಡಲದಲ್ಲಿ ಬಜೆಟ್ ಅನುಮೋದನೆ ಆಗದ ಹೊರತು ಆಗಸ್ಟ್ 1ರಿಂದ ನೌಕರರ ವೇತನ ಪಾವತಿ ಒಳಗೊಂಡು ರಾಜ್ಯ ಬೊಕ್ಕಸದಿಂದ ಪೈಸೆಯನ್ನೂ ಖರ್ಚು ಮಾಡಲು ಅವಕಾಶವಿಲ್ಲ.

ಸಿಎಂ ಕುಮಾರಸ್ವಾಮಿ ಅವರು ಬುಧವಾರ(ಜು.17) ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚನೆ ಮಾಡುವ ನಿರೀಕ್ಷೆಯಿದ್ದು, ಬಹುಮತ ಸಾಬೀತುಪಡಿಸಿದರೆ ಯಾವ ಆತಂಕವೂ ಇಲ್ಲ. ಈ ತಿಂಗಳ 26ರವರೆಗೆ ಅಧಿವೇಶನ ಇರಲಿದ್ದು, ಹಣಕಾಸು ವಿಧೇಯಕ ಪಾಸ್ ಆಗಲಿದೆ. ಒಂದು ವೇಳೆ, ವಿಶ್ವಾಸಮತಕ್ಕೆ ಸೋಲಾದರೆ ಮೈತ್ರಿ ಸರಕಾರ ಉರುಳುವ ಕಾರಣ ಬಜೆಟ್ ಅನುಮೋದನೆ ಹೇಗೆ ಎಂಬ ಚರ್ಚೆ ನಡೆದಿದೆ. ಹೊಸ ಸರಕಾರ ಅಧಿಕಾರಕ್ಕೆ ಬಂದು 2 ತಿಂಗಳ ಅವಧಿಗೆ ಲೇಖಾನುದಾನ ಪಡೆದು ಬಳಿಕ ಹೊಸ ಬಜೆಟ್ ಮಂಡನೆ ಮಾಡುವ ಸಾಧ್ಯತೆಯೂ ಇದೆ.